## ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಸಿಡಿ-2939/2021/ಎ.ಆರ್.ಎಲ್.ಒ-1. ದಿನಾಂಕ:11-04-2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರನ್ವಯ ವರದಿ

**ವಿಷಯ**:- ಶ್ರೀ ಕೆ.ಎಂ. ಪ್ರಥಮ್, ಉಪ ನಿರ್ದೇಶಕರು, ಕಾರ್ಖಾನೆ ಮತ್ತು ಬಾಯ್ಲರ್ಸ್ ಇಲಾಖೆ, ಬನ್ನೇರಘಟ್ಟ, ಬೆಂಗಳೂರು ರವರು ದುರ್ನಡತೆ ಎಸಗಿರುವ ಬಗ್ಗೆ.

******

ಶ್ರೀ ಎನ್.ಜಿ. ಅನಿಲ್ ಕುಮಾರ್, ನಂ:35, 5ನೇ ಕ್ರಾಸ್, 7ನೇ ಮುಖ್ಯರಸ್ತೆ, ಲಕ್ಷ್ಮಿನಾರಾಯಣಪುರ, ಶ್ರೀರಾಮಪುರ, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು ಶ್ರೀ ಕೆ.ಎಂ. ಪ್ರಥಮ್, ಉಪ ನಿರ್ದೇಶಕರು, ಕಾರ್ಖಾನೆ ಮತ್ತು ಬಾಯ್ಲರ್ಸ್ ಇಲಾಖೆ, ಬನ್ನೇರಘಟ್ಟ, ಬೆಂಗಳೂರು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಸಲ್ಲಿಸಿ ಎದುರುದಾರರು ಕರ್ತವ್ಯದಲ್ಲಿ ದುರ್ನಡತೆ ಎಸಗಿರುವ ಬಗ್ಗೆ ಸೂಕ್ತ ವಿಚಾರಣೆ ಮಾಡಿ ಶಿಸ್ತು ಕ್ರಮ ಜರುಗಿಸುವಂತೆ ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ:- ದೂರುದಾರರ ಆಪಾದನೆ ಏನೆಂದರೆ, ಎದುರುದಾರರಾದ ಶ್ರೀ ಕೆ.ಎಂ. ಪ್ರಥಮ್ ರವರು ಉಪನಿರ್ದೇಶಕರು, ಕಾರ್ಖಾನೆ ಮತ್ತು ಬಾಯ್ಲರ್ಸ್ ಇಲಾಖೆ, ದಾವಣಗೆರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಒಬ್ಬ ಗ್ರೂಪ್ 'ಎ' ಸರ್ಕಾರಿ ಅಧಿಕಾರಿಯಾಗಿದ್ದುಕೊಂಡು ಕರ್ನಾಟಕ ನಾಗರೀಕ ಸೇವಾ ನಡತೆ

ನಿಯಮಗಳು, 1966 ರ ನಿಯಮ 16 ಅನ್ನು ಉಲ್ಲಂಘಿಸಿ ಸರ್ಕಾರದಿಂದ ಪೂರ್ವಾ ಮಂಜೂರಾತಿ ಪಡೆಯದೇ ಬೆಳ್ಳಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್, ಬೆಂಗಳೂರಿನ ಆಡಳಿತ ಮಂಡಳಿಯ ನಿರ್ದೇಶಕರಾಗಿ 2015 ರಿಂದ 2018 ರವರೆಗೆ ಕಾನೂನು ಬಾಹಿರವಾಗಿ ಕಾರ್ಯನಿರ್ವಹಿಸಿ, ತಮ್ಮ ಮೇಲಾಧಿಕಾರಿಗಳಿಂದ ಕೇಂದ್ರ ಸ್ಥಾನ ಬಿಡಲು (ದಾವಣಗೆರೆ ಇಂದ ಬೆಂಗಳೂರಿಗೆ) ಅನುಮತಿ ಪಡೆಯದೇ ಮತ್ತು ರಜೆ ಪಡೆಯದೇ ಸೊಸೈಟಿಯ ಆಡಳಿತ ಮಂಡಳಿಯ ಸಭೆಗೆ 2015 ರಿಂದ 2018 ರವರೆಗೆ 22 ಬಾರಿ ಹಾಜರಾಗಿ ತಮ್ಮ ಕರ್ತವ್ಯದಲ್ಲಿ ಲೋಪವೆಸಗಿದ್ದಾರೆಂದು ಆರೋಪಿಸಿರುತ್ತಾರೆ.

3. ದೂರುದಾರರ ಮುಂದುವರೆದ ಆರೋಪವೇನೆಂದರೆ, ಸರ್ಕಾರಿ ನೌಕರರಾದ ಎದುರುದಾರರು ನಾಗರೀಕ ಸೇವಾ ಮತ್ತು ನಡತೆ ನಿಯಮಗಳ ಬಗ್ಗೆ ಪೂರ್ಣವಾದ ಅರಿವಿದ್ದರೂ ಬೆಳ್ಳಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್, ಬೆಂಗಳೂರಿನ ಆಡಳಿತ ಮಂಡಳಿಯ ನಿರ್ದೇಶಕರಾಗಿ ತಮ್ಮ ಕುಟುಂಬದವರಿಗೆ, ಸಂಬಂಧಿಕರಿಗೆ ಮತ್ತು ಸ್ನೇಹಿತರಿಗೆ ಸದರಿ ಸೊಸೈಟಿಯಿಂದ ಸಾಲ ಮಂಜೂರು ಮಾಡಿಸಿಕೊಳ್ಳಲು ಮತ್ತು ಹಣ ಡಿಪಾಸಿಟ್ ಮಾಡಿಸಿ, ಹೆಚ್ಚಿನ ಪ್ರಮಾಣದಲ್ಲಿ ಡಿಪಾಸಿಟ್ ಮೇಲೆ ಬಡ್ಡಿ ಪಡೆಯಲು, ಅನುಕೂಲವಾಗುವಂತೆ ಸೊಸೈಟಿಯಲ್ಲಿ ನಿಯಮ ಬಾಹಿರವಾಗಿ ಆಡಳಿತ ಮಂಡಳಿಯ ನಿರ್ದೇಶಕರಾಗಿ ಕರ್ತವ್ಯನಿರ್ವಹಿಸಿ ತಮ್ಮ ಕರ್ತವ್ಯದಲ್ಲಿ ದುರ್ನಡತೆ ಎಸಗಿದ್ದಾರೆ. ಈ ಕುರಿತಂತೆ, ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿ ಕೇಳಿದಾಗ ತಮ್ಮ ಮೇಲೆ ಸರ್ಕಾರ ಕಾನೂನು ಕ್ರಮ ಜರುಗಿಸಬಹುದು ಎಂದು ಅರಿತು ತಕ್ಷಣ 2019 ರಲ್ಲಿ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಆದ್ದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ ಉಲ್ಲಂಘಿಸಿ ಕರ್ತವ್ಯ ನಿರ್ವಹಿಸಿರುವ ಎದುರುದಾರರ ವಿರುದ್ಧ ಸೂಕ್ತ ತನಿಖೆ/ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ಕೋರಿಕೊಂಡಿರುತ್ತಾರೆ.

4. ದೂರುದಾರರು ತಮ್ಮ ದೂರಿನೊಂದಿಗೆ, ಬೆಳ್ಳಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್, ಬೆಂಗಳೂರಿನ ಷೇರ್ ಕ್ಯಾಪಿಟಲ್ ಶೆಡ್ಯೂಲ್ ಪ್ರತಿ, ಆಡಳಿತ ಮಂಡಳಿಯ ನಿರ್ದೇಶಕರ ಪಟ್ಟಿಯ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

5. ದೂರುದಾರರ ಆಪಾದನೆಗೆ ಸಂಬಂಧಪಟ್ಟಂತೆ, ಎದುರುದಾರರು ತಮ್ಮ ದಿನಾಂಕ:28-12-2021 ರ ಆಕ್ಷೇಪಣೆ ಮತ್ತು ದಾಖಲಾತಿ ಪ್ರತಿಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ಬೆಳ್ಳಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್, ವಿಜಯನಗರ ಬೆಂಗಳೂರು, ಸಂಸ್ಥೆಯು 2015 ರಲ್ಲಿ ಸ್ಥಾಪನೆ ಆಗಿದ್ದು, ಈ ಸಂಸ್ಥೆಯಲ್ಲಿ ತಾವು ದಿನಾಂಕ:24-08-2015 ರಂದು 2 ಷೇರುಗಳನ್ನು ರೂ.2,000/- ಮೊತ್ತಕ್ಕೆ ಖರೀದಿಸಿ ಈ ಬಗ್ಗೆ ತಮ್ಮ ವಾರ್ಷಿಕ ಆಸ್ತಿ/ಋಣಪಟ್ಟಿಯಲ್ಲಿ ನಮೂದಿಸಿ ದಿನಾಂಕ: 22-4-2016 ರಂತೆ ತಮ್ಮ ಇಲಾಖೆಯ ಕೇಂದ್ರ ಕಛೇರಿಗೆ ಮಾಹಿತಿಯನ್ನು ಸಲ್ಲಿಸಲಾಗಿದೆ ಹಾಗೂ ಇದೇ ಮಾಹಿತಿಯನ್ನು ಕಾಲ-ಕಾಲಕ್ಕೆ 2017 ರಿಂದ 2021 ರವರೆಗೂ ಸಲ್ಲಿಸಲಾಗಿದೆ ಎಂದು ಹೇಳಿರುತ್ತಾರೆ.

6. ಈ ಸಂಸ್ಥೆಯಲ್ಲಿ ತಾವು ಅಧಿಕೃತವಾಗಿ ಸದಸ್ಯರಾಗಿದ್ದ ಕಾರಣ ಸೆಪ್ಟೆಂಬರ್-2015 ರಲ್ಲಿ ಸದರಿ ಸಂಸ್ಥೆಯ ಸ್ಥಾಪನ ಸದಸ್ಯರು ಹಾಗೂ ಹಾಲಿ ಅಧ್ಯಕ್ಷರು/ನಿರ್ದೇಶಕರು ಆಗಿರುವ ತಮ್ಮ ಸ್ನೇಹಿತರುಗಳ ಸಲಹೆ ಮತ್ತು ಇತರೆ ಸಾಮಾನ್ಯ ಸದಸ್ಯರ ಒತ್ತಾಯದ ಮೇರೆಗೆ ತಾವು ಈ ಸಂಸ್ಥೆಯ ನಿರ್ದೇಶಕರಾಗಲು ಮೌಖಿಕ ಒಪ್ಪಿಗೆ ನೀಡಿದ ಮೇರೆಗೆ ಸದರಿಯವರು ತಮ್ಮ ವಿವರವನ್ನು ಪಡೆದು ಭರ್ತಿ ಮಾಡಿಕೊಟ್ಟ ಅರ್ಜಿಯ ನಮೂನೆಯಲ್ಲಿ ಸಹಿ ಮಾಡಿ ನೀಡಿರುವುದಾಗಿ ಹಾಗೂ ನಂತರದ ದಿನಗಳಲ್ಲಿ ತಾವು ಸದರಿ ಸಂಸ್ಥೆಯ ನಿರ್ದೇಶಕನಾಗಿರುವ ವಿಷಯುವನ್ನು ತಮಗೆ ತಿಳಿಸಿರುತ್ತಾರೆಂದು ಹೇಳಿರುತ್ತಾರೆ.

7. 2015ನೇ ಸಾಲಿನಲ್ಲಿ ಸದರಿ ಸಂಸ್ಥೆಗೆ ಯಾವುದೇ ಚುನಾವಣೆ ನಡೆದಿರುವುದಿಲ್ಲ ಹಾಗೂ ತಾವು ಭಾಗವಹಿಸಿರುವುದಿಲ್ಲ. ಬದಲಾಗಿ ಸ್ಥಾಪನ ಸದಸ್ಯನಾದ ಕಾರಣ

ನಿರ್ದೇಶಕರಾಗಿ ಆಯ್ಕೆ ಮಾಡಲಾಗಿರುತ್ತದೆಂದು ಹೇಳಿರುತ್ತಾರೆ. ಆ ವೇಳೆಯಲ್ಲಿ ತಾವು ಹುಬ್ಬಳ್ಳಿ ವಿಭಾಗೀಯ ಕೇಂದ್ರ ಸ್ಥಾನದಲ್ಲಿ ಬಾಯ್ಲರ್‌ಗಳ ಹಿರಿಯ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ಕಾರಣ ಸದರಿ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಿಗೆ ತಮ್ಮಿಂದ ಜವಬ್ದಾರಿಯನ್ನು ನಿರ್ವಹಿಸಲು ಸಾಧ್ಯವಿಲ್ಲವೆಂದು ಹಾಗೂ ತಮ್ಮನ್ನು ಬಿಡುಗಡೆಗೊಳಿಸುವಂತೆ ಮೌಖಿಕವಾಗಿ ತಿಳಿಸಿರುವುದಾಗಿ ಹೇಳಿರುತ್ತಾರೆ.

8. ಆದರೆ, ಅದಕ್ಕೆ ಸದರಿ ಸಂಸ್ಥೆಯವರು ತಾವು ಸಂಸ್ಥೆಯಿಂದ ಯಾವುದೇ ಆದಾಯವಾಗಲೀ ಅಥವಾ ಸಂಪನ್ಮೂಲ/ಹಣದ ಹೂಡಿಕೆಯಾಗಲೀ ಮಾಡುವುದಿಲ್ಲವಾದ ಕಾರಣ ಯಾವುದೇ ತೊಂದರೆ ಇಲ್ಲದೇ ಆಡಳಿತ ಮಂಡಳಿಯಲ್ಲಿ ಮುಂದುವರೆಯಬಹುದಾಗಿ ತಿಳಿಸಿರುತ್ತಾರೆಂದು ಹೇಳಿರುತ್ತಾರೆ. ನಂತರದ ದಿನಗಳಲ್ಲಿ ತಾವು ಸರ್ಕಾರಿ ನೌಕರಿಯಲ್ಲಿದ್ದು ಹುಬ್ಬಳ್ಳಿ ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿದ್ದುದರಿಂದ ಸಾರ್ವಜನಿಕರಿಂದ ಯಾವುದೇ ಸಂಪನ್ಮೂಲ ಕ್ರೋಢೀಕರಿಸಲು ನಿಯಮಾನುಸಾರ ಅವಕಾಶವಿರುವುದಿಲ್ಲವೆಂಬ ವಿಷಯವನ್ನು ಮನವರಿಕೆ ಮಾಡಿಕೊಂಡು ಸದರಿ ಸಂಸ್ಥೆಯ ಯಾವುದೇ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು, ಸಂಸ್ಥೆಯ ಬೆಳವಣಿಗೆಯಲ್ಲಿ ಸಕ್ರೀಯವಾಗಿ ಭಾಗವಹಿಸಲು ಸಾಧ್ಯವಾಗುವುದಿಲ್ಲ ಮತ್ತು ತಮ್ಮ ಒಬ್ಬರ ವಿಫಲತೆಯಿಂದ ಸಂಸ್ಥೆಯ ಬೆಳವಣಿಗೆಗೆ ಯಾವುದೇ ಧಕ್ಕೆ ಉಂಟಾಗಬಾರದೆಂಬ ಕಾರಣಕ್ಕೆ ದಿನಾಂಕ:14–10–2017 ರಂದು ಸಂಸ್ಥೆಯ ನಿರ್ದೇಶಕರ ಸ್ಥಾನದಿಂದ ರಾಜೀನಾಮೆಯನ್ನು ಸಲ್ಲಿಸಿರುವುದಾಗಿ ಹಾಗೂ ನಂತರದ ದಿನಗಳಲ್ಲಿ ಸಂಸ್ಥೆಯ ಆಡಳಿತ ಮಂಡಳಿ ತಮ್ಮ ರಾಜೀನಾಮೆಯನ್ನು ಅಂಗೀಕರಿಸಿ ಅನುಮೋದನೆ ನೀಡಿರುತ್ತಾರೆಂದು ಹೇಳಿರುತ್ತಾರೆ.

9. ಎದುರುದಾರರು ತಮ್ಮ ಮುಂದುವರೆದ ಆಕ್ಷೇಪಣೆಯಲ್ಲಿ, ಬೆಳ್ಳಿ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್, ಬೆಂಗಳೂರು ಇಲ್ಲಿ ಆಡಳಿತ ಮಂಡಳಿಯ ನಿರ್ದೇಶಕನಾಗಿದ್ದ ಸಮಯದಲ್ಲಿ ತಾವು ಆ ಸಂಸ್ಥೆಯಿಂದ ಯಾವುದೇ ಆದಾಯ ಗಳಿಕೆ ಅಥವಾ ಯಾವುದೇ ಹಣದ ಹೂಡಿಕೆ ಮಾಡಿರುವುದಿಲ್ಲ. ತಾವು ಸದರಿ ಸಂಸ್ಥೆಯ

ಸಾಮಾನ್ಯ ಸದಸ್ಯನಾದ ಕಾರಣ ಸಂಸ್ಥೆಯಿಂದ ಯಾವುದೇ ಹಣ ಗಳಿಕೆ ಮಾಡುವ ಉದ್ದೇಶವಿಲ್ಲದಿದ್ದ ಕಾರಣ ಇತರ ಸದಸ್ಯರ ಒತ್ತಾಯದ ಮೇರೆಗೆ ಹಾಗೂ ಕಾನೂನು ಬದ್ಧ ಆಡಳಿತದ ಸಲಹೆ ನೀಡಬಹುದೆಂಬ ನಂಬಿಕೆಯಿಂದ ತಾವು 2015 ರಲ್ಲಿ ನಿರ್ದೇಶಕನಾಗಲು ಮೌಖಿಕ ಒಪ್ಪಿಗೆ ನೀಡಿರುವುದಾಗಿ ಹೇಳಿಕೊಂಡಿರುತ್ತಾರೆ.

10. ಎದುರುದಾರರು ಸದರಿ ಸಂಸ್ಥೆಯಲ್ಲಿ ನಿರ್ದೇಶಕರಾಗಿದ್ದ ವೇಳೆಯಲ್ಲಿ ಕೇವಲ ಒಂದು ದಿನ ಮಾತ್ರ ದಿನಾಂಕ: 14-10-2017 ರಂದು ತಮ್ಮ ನಿರ್ದೇಶಕರ ಸ್ಥಾನದಿಂದ ರಾಜೀನಾಮೆ ಸಲ್ಲಿಸಲು ಸದರಿ ಸಂಸ್ಥೆಯ ಸಭೆಗೆ ಹಾಜರಾಗಿ ಅಂದೇ ಸಂಸ್ಥೆಯ ಅಧ್ಯಕ್ಷರಿಗೆ ತಮ್ಮ ರಾಜೀನಾಮೆ ಪತ್ರವನ್ನು ಸಲ್ಲಿಸಿ ಸ್ವೀಕೃತಿ ಪಡೆದಿರುವುದಾಗಿ ಹೇಳಿರುತ್ತಾರೆ. ಆ ವೇಳೆಯಲ್ಲಿ ತಾವು ಬೆಂಗಳೂರಿನ ಬಾಯ್ಲರ್ಸ್ ಉಪನಿರ್ದೇಶಕರು (ಬಿಎಂಟಿಟಿಸಿ), ಕೇಂದ್ರ ಕಛೇರಿ ಇಲ್ಲಿ ಹೆಚ್ಚುವರಿ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರಣ ಹಾಗೂ ಸದರಿ ದಿನದಂದು ತಾವು ಬೆಂಗಳೂರಿನಲ್ಲಿದ್ದ ಕಾರಣ ಸಂಸ್ಥೆಗೆ ಭೇಟಿ ನೀಡಿರುವುದಾಗಿ ಹೇಳಿರುತ್ತಾರೆ. ಆದ್ದರಿಂದ, ದಿನಾಂಕ:14-10-2017 ರಂದು ಸಂಸ್ಥೆಯ ನಡವಳಿ ವಹಿಯಲ್ಲಿ ಸಹಿ ಮಾಡಿರುವುದಾಗಿ ಮತ್ತು ಹಿಂದೆ ಗೈರುಹಾಜರಾಗಿದ್ದ ದಿನಾಂಕ:09-09-2017ರ ದಿನದ ಸಭೆಯ ನಡವಳಿಯನ್ನು ಓದಿ ನೋಡಿದೆ ಎಂದು ದಿನಾಂಕ:14-10-2017 ರಂದು ಸಹಿ ಮಾಡಿರುವುದಾಗಿ ಹೇಳಿರುತ್ತಾರೆ.

11. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸದರಿ ವಿಷಯವು ನಿಯಮದ ಅಂಶಗಳ ತಪ್ಪು ತಿಳುವಳಿಕೆಯಿಂದ ಉಂಟಾಗಿ ನಂತರ ಸದರಿ ವಿಷಯದಲ್ಲಿ ಸರಿಯಾದ ತಿಳುವಳಿಕೆ ಆದ ತಕ್ಷಣ ಇದನ್ನು ಸರಿಪಡಿಸಿಕೊಂಡಿರುವುದಾಗಿ ಹಾಗೂ ಆ ದಿನಗಳಲ್ಲಿ ಯಾವುದೇ ಹಣದ ಆದಾಯ ಅಥವಾ ಹೂಡಿಕೆಯಲ್ಲಿ ತೊಡಗಿರುವುದಿಲ್ಲವಾದ ಕಾರಣ ಈ ಪ್ರಕರಣವು ಉದ್ದೇಶಪೂರ್ವಕವಲ್ಲವೆಂದು ಹಾಗೂ ಕೆ.ಸಿ.ಎಸ್.ಆರ್. ನಿಯಮ 16 (3) ರ ಮೊದಲ ಕಂಡಿಕೆ ಬದಲಾಗಿ ಎರಡನೇ ಕಂಡಿಕೆಯನ್ನು ಈ ವಿಷಯಕ್ಕೆ ತಪ್ಪಾಗಿ ಅರ್ಥೈಹಿಸಿಕೊಂಡು ಮಾಡಲಾಗಿದೆಂದು ಹೇಳಿಕೊಂಡಿದ್ದು ತಮ್ಮ ವಿರುದ್ಧ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ.

12. ಎದುರುದಾರರು ತಮ್ಮ ಆಕ್ಷೇಪಣೆಯೊಂದಿಗೆ ದಿನಾಂಕ:14-10-2017ರ ದಿನಾಂಕದ ರಾಜೀನಾಮೆ ಪತ್ರದ ಪ್ರತಿ, ದಿನಾಂಕ:20-01-2018 ರ ರಾಜೀನಾಮೆ ಅಂಗೀಕರಿಸಿದ ಪ್ರತಿ, ದಿನಾಂಕ:13-4-2017 ರ ಕಛೇರಿ ಜ್ಞಾಪನ ಪತ್ರದ ಪ್ರತಿ ಹಾಗೂ ಸಭೆಯ ನಡವಳಿಕೆಯ ವಹಿಯ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

13. ದೂರುದಾರರ ದೂರಿನ ಅಂಶಗಳು, ಎದುರುದಾರರ ಆಕ್ಷೇಪಣೆ ಹಾಗೂ ಉಭಯಪಕ್ಷಗಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರಾದ ಶ್ರೀ ಕೆ.ಎಂ. ಪ್ರಥಮ್ ರವರು ಕಾರ್ಖಾನೆ ಮತ್ತು ಬಾಯ್ಲರ್ಸ್ ಇಲಾಖೆಯಲ್ಲಿ ಉಪನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿರುವುದು ನಿರ್ವಿವಾದಿತ. ಎದುರುದಾರರು ತಾವು ಬೆಳ್ಳಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್, ವಿಜಯನಗರ, ಬೆಂಗಳೂರು ಇಲ್ಲಿ ಆಡಳಿತ ಮಂಡಳಿಯ ನಿರ್ದೇಶಕರಾಗಿ 2015 ರಿಂದ 2018 ರವರೆಗೆ ಕಾರ್ಯನಿರ್ವಹಿಸಿರುವುದನ್ನು ಅಲ್ಲಗಳೆದಿರುವುದಿಲ್ಲ. ಆದರೆ, 2015 ರಲ್ಲಿ ತಾವು ಸದರಿ ಸಂಸ್ಥೆಯ ನಿರ್ದೇಶಕನಾಗಲು ಮೌಖಿಕ ಒಪ್ಪಿಗೆ ನೀಡಿರುವುದಾಗಿ ಎದುರುದಾರರು ಒಪ್ಪಿಕೊಂಡಿರುತ್ತಾರೆ. ಮೇಲಾಗಿ, ಎದುರುದಾರರು ಬೆಳ್ಳಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್, ಬೆಂಗಳೂರು ಇಲ್ಲಿ ನಿರ್ದೇಶಕರಾಗಿ ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಸದಸ್ಯತ್ವ ಹೊಂದಿರುವುದು ಸಹ ಎದುರುದಾರರು ಒಪ್ಪಿಕೊಂಡಿದ್ದಾರೆ. ಆದರೆ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 2021 ರ ನಿಯಮ 18(3) ರಡಿಯಲ್ಲಿ [ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮ, 1966 ರ ಕಲಂ 16(3) ] ತಾವು ಬೆಳ್ಳಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್, ವಿಜಯನಗರ ಬೆಂಗಳೂರಿನ ಆಡಳಿತ ಮಂಡಳಿಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿದ್ದೇನೆ ಎಂಬುದು ಎದುರುದಾರರ ಪ್ರತಿಪಾದನೆ ಆಗಿರುವುದಿಲ್ಲ.

14. ಆದರೆ. ಎದುರುದಾರರು ತಮ್ಮ ಕೃತ್ಯವು ಉದ್ದೇಶಪೂರ್ವಕವಲ್ಲ ಕೆ.ಸಿ.ಎಸ್.ಆರ್. ನಿಯಮ, 16 (3) ರ ಮೊದಲೆ ಕಂಡಿಕೆ ಬದಲಾಗಿ ಎರಡನೆ ಕಂಡಿಕೆಯನ್ನು ತಪ್ಪಾಗಿ

ಅರ್ಥೈಸಿಕೊಂಡು ಮಾಡಿರುವ ಕ್ರಮವಾಗಿರುತ್ತದೆ. ಆದ್ದರಿಂದ ತಮ್ಮ ವಿರುದ್ಧದ ಪ್ರಕರಣ ಮುಕ್ತಾಯಗೊಳಿಸಬೇಕೆಂದು ಕೋರಿ ಕೊಂಡಿರುವ ಮನವಿಯನ್ನು ಅಂಗೀಕರಿಸಲು ಸಾಧ್ಯವಿಲ್ಲ. ಕಾರಣ ಎದುರುದಾರರು ಒಬ್ಬ ಸರ್ಕಾರಿ ಪತ್ರಾಂಕಿತ 'ಎ' ಶ್ರೇಣಿಯ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ ನಿಯಮ (ನಡತೆ)ದ ನಿಯಮಗಳನ್ನು ತಪ್ಪು ಅರ್ಥೈಹಿಸಿಕೊಂಡಿದ್ದಾರೆ ಎನ್ನುವ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ.

15. ಎದುರುದಾರರು 2015 ರ ನಂತರ ದಿನಾಂಕ:14-10-2017 ರಂದು ಬೆಳ್ಳಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್, ಬೆಂಗಳೂರಿನ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ಹಾಗೂ ಸದರಿ ರಾಜೀನಾಮೆಯು ದಿನಾಂಕ:20-1-2018 ರಂದು ಅಂಗೀಕಾರವಾಗಿರುವುದು ಎದುರುದಾರರು ಸಲ್ಲಿಸಿರುವ ದಾಖಲೆಗಳಿಂದ ಕಂಡುಬರುತ್ತದೆ. ಆದರೆ, ಇದರಿಂದ ಎದುರುದಾರರು ದುರ್ನಡತೆ ಎಸಗಿಲ್ಲ ಎನ್ನುವ ಅಭಿಪ್ರಾಯಕ್ಕೆ ಬರಲು ಸಾಧ್ಯವಿಲ್ಲ. ಹೀಗಾಗಿ, 2015 ರಲ್ಲಿ ಕರ್ನಾಟಕ ಸರ್ಕಾರದ ಕಾರ್ಖಾನೆ ಮತ್ತು ಬಾಯ್ಲರ್ಸ್ ಇಲಾಖೆಯಲ್ಲಿ ಒಬ್ಬ ಹಿರಿಯ ಶ್ರೇಣಿಯ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಎದುರುದಾರರಾದ ಶ್ರೀ ಕೆ.ಎಂ. ಪ್ರಥಮ್ ರವರು ಬೆಳ್ಳಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್, ವಿಜಯನಗರ ಬೆಂಗಳೂರಿನಲ್ಲಿ ಆಡಳಿತ ಮಂಡಳಿಯ ನಿರ್ದೇಶಕರಾಗಲು ಯಾವುದೇ ಪೂರ್ವಾನುಮತಿಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯದೇ ಆಡಳಿತ ಮಂಡಳಿಯ ನಿರ್ದೇಶಕರಾಗಿ ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮ, 2021 ರ ನಿಯಮ 18(3) ರ [ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮ, 1966 ರ ಕಲಂ 16(3) ] ಉಲ್ಲಂಘನೆ ಮಾಡಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

16. ಈ ಹಂತದಲ್ಲಿ Karnataka State Civil Services (Conduct Rules), 2021 ರ ನಿಯಮ 18(3) ಅನ್ನು ಉಲ್ಲೇಖಿಸುವುದು ಅವಶ್ಯಕವೆನಿಸುತ್ತದೆ. ಸದರಿ ನಿಯಮವು ಈ ಕೆಳಕಂಡಂತೆ ಇದೆ.

**Karnataka State Civil Services (Conduct Rules), 2021, Rule 18. Private Trade or Employment :- (3)** No. Government servant shall without the previous sanction of the Prescribed Authority except in the discharge of his official duties take part in the registration, promotion or management of any bank or other company which is required to be registered under the Company Act, 1956 (Central Act 1 of 1956) or any other law for the time being in force or any co-operative society for commercial purposes.

Provided that, a Government servant may take part in the registration, promotion or management of a co-operative society substantially for the benefit of Government Servants, registered or deemed to be registered under the Karnataka Co-operative Societies Act, 1959 (Karnataka Act 11 of 1959) or of a literary, scientific, or charitable society registered or deemed to be registered under the Karnataka Societies Registration Act, 1960 (Karnataka Act 17 of 1960).

17. ಎದುರುದಾರರು ಬೆಳ್ಳಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್, ವಿಜಯನಗರ ಬೆಂಗಳೂರಿನಲ್ಲಿ ಆಡಳಿತ ಮಂಡಳಿಯ ನಿರ್ದೇಶಕರಾಗಿದ್ದ ವೇಳೆಯಲ್ಲಿ 2015 ರಿಂದ 2018ರವರೆಗೆ 22 ಬಾರಿ ಆಡಳಿತ ಮಂಡಳಿಯ ಸಭೆಗೆ ಮೇಲಾಧಿಕಾರಿಗಳಿಂದ ಕೇಂದ್ರ ಸ್ಥಾನ ಬಿಡಲು ಅನುಮತಿ ಪಡೆಯದೇ ಹಾಜರಾಗಿ ಕರ್ತವ್ಯಲೋಪವೆಸಗಿದ್ದಾರೆ ಎನ್ನುವ ದೂರುದಾರರ ಆಪಾದನೆಗಳನ್ನು ಎದುರುದಾರರು ಅಲ್ಲಗಳೆದಿರುತ್ತಾರೆ. ಆದರೆ, ಸದರಿ ಆಪಾದನೆಗೆ ಪೂರಕವಾದ ದಾಖಲೆಗಳನ್ನು ದೂರುದಾರರು ಹಾಜರುಪಡಿಸಿರುವುದಿಲ್ಲ. ಮೇಲಾಗಿ ಎದುರುದಾರರು ಸಹ ತಾವು ಆಡಳಿತ ಮಂಡಳಿಯ ಸಭೆಗೆ ಕೇವಲ ಒಂದು ಬಾರಿ ಹಾಜರಾಗಿರುವ ಬಗ್ಗೆ

ಒಪ್ಪಿಕೊಂಡಿರುತ್ತಾರೆ. ಸದರಿ ಆಪಾದನೆಗೆ ಪೂರಕವಾದ ದಾಖಲೆಗಳನ್ನು ದೂರುದಾರರು ಹಾಜರುಪಡಿಸಿರುವುದಿಲ್ಲ. ಮೇಲಾಗಿ ಎದುರುದಾರರು ಸಹ ತಾವು ಆಡಳಿತ ಮಂಡಳಿಯ ಸಭೆಗೆ ಕೇವಲ ಒಂದು ಬಾರಿ ಹಾಜರಾಗಿರುವ ಬಗ್ಗೆ ಹಾಗೂ ದೂರುದಾರರು ಆಪಾದಿಸಿರುವಂತೆ 22 ಬಾರಿ ಸಭೆಗೆ ಹಾಜರಾಗಿರುವುದಿಲ್ಲ ಎನ್ನುವ ಬಗ್ಗೆ 2015 ರಿಂದ 2018ರ ವರೆಗಿನ ಪೂರ್ತಿ ಅವಧಿಯ ಆಡಳಿತ ಮಂಡಳಿಯ ನಡವಳಿಕೆ ವಹಿಯ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಹೀಗಾಗಿ ಮೇಲಾಧಿಕಾರಿಗಳ ಅನುಮತಿ ಇಲ್ಲದೇ ಆಡಳಿತ ಮಂಡಳಿಯ ಸಭೆಗೆ ಹಾಜರಾಗುವ ಕ್ರಮವು ಸಹ ಸರ್ಕಾರಿ ನೌಕರರ ದುರ್ನಡತೆ ಆಗಿರುತ್ತದೆ.

18. ಇನ್ನೂಳಿದಂತೆ, ಎದುರುದಾರರು ಸದರಿ ಸಂಸ್ಥೆಯ ನಿರ್ದೇಶಕರಾಗಿದ್ದ ಅವಧಿಯಲ್ಲಿ ತಮ್ಮ ಕುಟುಂಬದವರಿಗೆ, ಸಂಬಂಧಿಕರಿಗೆ ಹಾಗೂ ಸ್ನೇಹಿತರಿಗೆ ಸೊಸೈಟಿಯಿಂದ ಸಾಲ ಮಂಜೂರು ಮಾಡಿಕೊಳ್ಳಲು ಮತ್ತು ಡಿಪಾಸಿಟ್ ಮಾಡಿಸಿ ಹೆಚ್ಚಿನ ಪ್ರಮಾಣದಲ್ಲಿ ಡಿಪಾಸಿಟ್ ಮೇಲೆ ಬಡ್ಡಿ ಪಡೆಯಲು ಅನುಕೂಲ ಮಾಡಿಕೊಟ್ಟಿರುತ್ತಾರೆ ಎನ್ನುವ ಆಪಾದನೆಗಳನ್ನು ರುಜುವಾತುಪಡಿಸುವಂತಹ ದಾಖಲೆಗಳನ್ನು ದೂರುದಾರರು ಹಾಜರುಪಡಿಸಿಲ್ಲದ ಕಾರಣ ಸದರಿ ಆಪಾದನೆಯನ್ನು ಮೇಲ್ನೋಟಕ್ಕೆ ರುಜುವಾತಾಗಿದೆ ಎನ್ನುವ ನಿರ್ಧಾರಕ್ಕೆ ಬರಲು ಆಗುವುದಿಲ್ಲ.

19. ಮೇಲೆ ಚರ್ಚಿಸಿರುವ ಕಾರಣಗಳಿಂದಾಗಿ, ಎದುರುದಾರರಾದ ಶ್ರೀ ಕೆ.ಎಂ. ಪ್ರಥಮ್, ಉಪನಿರ್ದೇಶಕರು, ಕಾರ್ಖಾನೆ ಮತ್ತು ಬಾಯ್ಲರ್ಸ್ ಇಲಾಖೆ, ಬನ್ನೇರಘಟ್ಟ, ಬೆಂಗಳೂರು ರವರು ಸರ್ಕಾರಿ ನೌಕರರಾಗಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ಬೆಳ್ಳಿ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್, ವಿಜಯನಗರ ಬೆಂಗಳೂರಿನ ಆಡಳಿತ ಮಂಡಳಿಯ ನಿರ್ದೇಶಕರಾಗಿ ಸೊಸೈಟಿ ನೆರವೇರಿಕೆ (management) ಯಲ್ಲಿ ಪಾಲ್ಗೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 2021 ರ ಕಲಂ 18(3) (ಕರ್ನಾಟಕ ನಾಗರೀಕ ಸೇವಾ (ನಡತೆ), ನಿಯಮ

1966 ರ ಕಲಂ 16(3)] ಉಲ್ಲಂಘಿಸಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 2021 ರ ನಿಯಮ 3 (I) (i),(ii) & (iii) ರಂತೆ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಎದುರುದಾರರ ವಿರುದ್ಧ ನಿಯಮಾನುಸಾರ ಸೂಕ್ತ ಶಿಸ್ತು ಕ್ರಮವನ್ನು ಶಿಸ್ತು ಪ್ರಾಧಿಕಾರದ ಮೂಲಕ ಜರುಗಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರಂತೆ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

20. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ಅನುಸರಣಾ ವರದಿಯನ್ನು ಸಲ್ಲಿಸುವಂತೆ ಕೋರಲಾಗಿದೆ. ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಲಾಗಿದೆ.

18/4/22

[ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.